332	do	70	14,760-00
333	do	60	19,206-00
334	do	100	43,000-00
335	Black Braided silk on Reel	45	1,447-65
336	do	100	3,538-00
337	do	100	3,538-00
338	do	100	3,975-00
339	do	17	801-21
	Grand Total		5,03,13,967-93

ರಾಜ್ಯದಲ್ಲಿ ವೈದ್ಯರ ವರ್ಗಾವಣೆಯಂ ವಿಧಾನ

೫೧೩. ಶ್ರೀ ಪಿ.ಜಿ.ಆರ್. ಸಿಂದ್ಯಾ (ಕನಕಪುರ):—ಮಾನ್ಯ ಆರೋಗ್ಯಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕ, ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ವರ್ಗ ಮಾಡುವಾಗ ಅನುಸರಿಸಿದ ವಿಧಾನಗಳೇನು;

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ ೨ ಎಸ್‌ಟಿಆರ್ ೯೦ ದಿನಾಂಕ ೨೯ನೇ ಮಾರ್ಚ್ ೧೯೯೦ರಲ್ಲಿ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ವರ್ಗಾವಣೆಯ ಮಾರ್ಗ ಸೂಚಿಯನ್ನು ಕೊಡಲಾಗಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು, ಸ್ಥಳೀಯ ಅವಶ್ಯಕತೆಗಳಿಗೆ ತಕ್ಕಂತೆ ಮತ್ತು ಜನ ಪ್ರತಿನಿಧಿಗಳಿಂದ ಬಂದ ಮನವಿಯನ್ನು ಗಮನದಲ್ಲಿಟ್ಟುಕೊಂಡು ವರ್ಗಾವಣೆಗಳನ್ನು ಮಾಡಲಾಗಿದೆ.

ಪ್ರಾಣಿ ಸಂಗ್ರಹಾಲಯಂಗಳಿಗೆ ವೆಚ್ಚವಾಗುತ್ತಿರುವ ಹಣ

೮೭೮. ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ):—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಬೇಕೆ:—

ಅ) ರಾಜ್ಯದಲ್ಲಿಯ ಪ್ರಾಣಿ ಸಂಗ್ರಹಾಲಯಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಪ್ರಾಣಿ ಸಂಗ್ರಹಾಲಯಗಳಲ್ಲಿ ಇರುವ ಪ್ರಾಣಿಗಳ ಸಂಖ್ಯೆ ಎಷ್ಟು?

ಇ) ಪ್ರತಿವರ್ಷ ಈ ಪ್ರಾಣಿಗಳ ಆಹಾರ ಇತ್ಯಾದಿಗಳಿಗೆ ವೆಚ್ಚವಾಗುವ ಹಣ ಎಷ್ಟು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಹಾಗೂ ಪಶುಸಂಗೋಪನೆ ಸಚಿವರು):—

ಅ) (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-೧ರಲ್ಲಿ ನಮೂದಿಸಲಾಗಿದೆ)

ಆ) ೧,೮೭೮ (ಪ್ರತಿಯೊಂದು ಪ್ರಾಣಿ ಸಂಗ್ರಹಾಲಯದಲ್ಲಿರುವ ಪ್ರಾಣಿಗಳ ಸಂಖ್ಯೆಯನ್ನು ಅನುಬಂಧ-೧ರಲ್ಲಿ ನಮೂದಿಸಲಾಗಿದೆ)

ಇ) ೧೯೮೯-೯೦ನೇ ಸಾಲಿಗೆ ವೆಚ್ಚವಾಗಿರುವ ಹಣ ರೂ. ೧೯,೧೮,೮೬೧-೪೪ (ಪ್ರತಿಯೊಂದು ಪ್ರಾಣಿ ಸಂಗ್ರಹಾಲಯಗಳಲ್ಲಿ ವೆಚ್ಚವಾಗಿರುವ ಹಣ ಅನುಬಂಧ-೧ರಲ್ಲಿ ನಮೂದಿಸಲಾಗಿದೆ).